ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: 9 ಕಂದಾಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ

ದಿನಾಂಕ : DATE 21/2/21

# ಮಕ್ಕಳ ಮಾರಾಟಕ್ಕೆ ಕುಖ್ಯಾತಿ ಪಡೆದ ಊರಲ್ಲಿ ಮಕ್ಕಳೊಂದಿಗೆ ಡೀಸಿ ವಾಸ್ತವ್ಯ

ಕ.ಪ್ರ 21/2/21

ಕಲಬುರಗಿ: ಜಿಲ್ಲಾಧಿಕಾರಿಗಳ ನಡೆ-ಹಳ್ಳಿಯ ಕಡೆ ಕಾರ್ಯಕ್ರಮದ ನಿಮಿತ್ತ ಜಿಲ್ಲೆಯ ಚಿಂಚೋಳಿ ತಾಲೂಕಿನ ಕುಂಚಾವರಂನಲ್ಲಿ ವಾಸ್ತವ್ಯ ಹೂಡಿರುವ ಕಲಬುರಗಿ ಜಿಲ್ಲಾಧಿಕಾರಿ ವಿವಿ ಜ್ಯೋತ್ಸ್ನಾ ಅವರು ತಮ್ಮಿಬ್ಬರು ಮಕ್ಕಳಾದ ಅಮೂಲ್ಯ, ಆದಿತ್ಯರೊಂದಿಗೆ ಇಡೀ ದಿನ ಗ್ರಾಮದಲ್ಲಿ ಕಳೆದು ಗಮನ ಸೆಳೆದರು. ಶನಿವಾರದ ಬೆಳಗ್ಗೆ 10ರ ಹೊತ್ತಿಗಾಗಲೇ ತಮ್ಮ ಲಗೇಜ್ ಸಮೇತ ಈ ಗ್ರಾಮಕ್ಕೆ ಆಗಮಿಸಿರುವ ಜ್ಯೋತ್ಸ್ನಾ ಅವರ ಮಕ್ಕಳಿಬ್ಬರನ್ನು ಕಂಡು ಊರವರು ಹಿಗ್ಗಿದ್ದಾರೆ. ಮೇಡಂ ಅವರು ತಮ್ಮಿಬ್ಬರು ಮಕ್ಕಳನ್ನೂ ಕರೆದುಕೊಂಡು ಬಂದ ಖುಷಿ ಇಡೀ ದಿನ ಊರನ್ನು ಆವರಿಸಿತ್ತು. ಕುಂಚಾವರಂ ದಟ್ಟ ಕಾನನದ ಊರು, ತೆಲಂಗಾಣ ಸೆರಗಿನ ಈ ಊರಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಹೀಗಾಗಿ ಮಕ್ಕಳಾದ ಆದಿತ್ಯ ಹಾಗೂ ಅಮೂಲ್ಯ ಇವರಿಬ್ಬರೊಂದಿಗೆ ಕುಂಚಾವರಂ ಕಾನನದೂರಿನ ಸಮಸ್ಯೆಗಳಿಗೆ ಕಿವಿಯಾಗುವ ಹಂಬಲ ತಮ್ಮದೆಂದು ಡಿಸಿಯವರೇ ತಮ್ಮ ಮಾತಲ್ಲಿ ಸ್ಪಷ್ಟಪಡಿಸಿದರು. 90ರ ದಶಕದಲ್ಲಿ ಈ ಊರು ಮಕ್ಕಳ ಮಾರಾಟದಿಂದಾಗಿಯೇ ರಾಷ್ಟ್ರದ ಗಮನ ಸೆಳೆದಿತ್ತು. ತೀರಾ ಇತ್ತೀಚೆಗೆ ಈ ಊರಲ್ಲಿ ಬಡತನದಿಂದ ಮಕ್ಕಳನ್ನು ಸಾಕಲಾಗದು ಎಂದು ಪೋಷಕರೇ ಕರುಳ ಕುಡಿಗಳನ್ನು ಅನಾಥಾಲಯಕ್ಕೆ ದತ್ತು ನೀಡಲು ಮುಂದೆ ಬಂದು ಮತ್ತೆ ಸುದ್ದಿಯಾಗಿದ್ದರು.



ಕಲಬುರಗಿ ಜಿಲ್ಲೆ ಚಿಂಚೋಳಿ ತಾಲೂಕಿನ ಕುಂಚಾವರಂ ಅಂಬೇಡ್ಕರ್ ವಸತಿ ನಿಲಯದಲ್ಲಿ ಮಕ್ಕಳೊಂದಿಗೆ ಡಿಸಿ ಜ್ಯೋತ್ಸ್ನಾ ಮಧ್ಯಾಹ್ನದ ಊಟ ಸವಿದರು.